ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ) :

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಲೆಕ್ಕ ಶೀರ್ಷಿಕೆ 4711–01–ಪ್ರವಾಹ ನಿಯಂತ್ರಣ ಕಾಮಗಾರಿಗಳು ಅಡಿಯಲ್ಲಿ ಅನುದಾನ ಬಿಡುಗಡೆ ಮಾಡಲಾಗಿದೆ.

1574(2175) ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ (ಕುಂದಾಪುರ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಣೆಬೆನ್ನೂರು ನಗರದಲ್ಲಿ 33 ವರ್ಷ ಒಂದು ಆಸ್ತಿಯನ್ನು ಒಂದು ಸಂಸ್ಥೆಯು ಅನಧಿಕೃತವಾಗಿ ಪುಕ್ಕಟೆಯಾಗಿ ಅನುಭವಿಸುತ್ತಿದ್ದರೆ ಅಕ್ರಮ ಸಕ್ರಮದಲ್ಲಿ ಅವರಿಗೆ ಕೊಡಲು ಬರುತ್ತದೆಯೇ ;

ಆ. ಹಾಗಿದ್ದಲ್ಲಿ, ಆ ಜಾಗಕ್ಕೆ ಚದರ ಅಡಿಗೆ ಸರ್ಕಾರ ಯಾವ ದರದಲ್ಲಿ ನಿಗಧಿಪಡಿಸಲು ಬರುತ್ತದೆ ;

ಇ. ಅಕ್ರಮ ಸಕ್ರಮ ಮಾಡಲು ಬಾರದಿದ್ದಲ್ಲಿ ಮಕ್ಕಟೆಯಾಗಿ ಹೊಂದಿರುವ ಸದರಿ ಆಸ್ತಿಯನ್ನು ಯಾವ ರೀತಿಯಾಗಿ ಯಾವ ಕ್ರಮದಿಂದ ನಗರಸಭೆಯು ಪುನಃ ವಾಪಸ್ಸು ಪಡೆಯಬೇಕು ?

ಶ್ರೀ ಎಸ್. ಆರ್.ಮೋರೆ (ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು) :

ಅ. ಇಲ್ಲ

ಆ. ಅನಧಿಕೃತ ಅನುಭೋಗದಲ್ಲಿರುವ ಜಾಗಕ್ಕೆ ದರ ನಿಗದಿ ಪಡಿಸುವುದು ಉದ್ಭವಿಸುವುದಿಲ್ಲ.

ಇ. ಎವಿಕ್ಷನ್ ಆಫ್ ಅನ್ ಆಥರೈಸ್ಡ್ ಆಕ್ಯುಪೆಂಟ್ಸ್ ಆಕ್ಟ್ (ಕರ್ನಾಟಕ ಪಬ್ಲಿಕ್ ಪ್ರಿಮೈಸಸ್ ಆಕ್ಟ್ 1974 ರ ಪ್ರಕಾರ) ನಗರಸಭೆಯು ವಾಪಸ್ಸು ಪಡೆಯಬಹುದು.

1575(2020)ಶ್ರೀ ಹಾಲಪ್ಪ ಹೆಚ್. (ಹೊಸನಗರ) ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

1. ಶಿವಮೊಗ್ಗ ನಗರದ 35ನೇ ವಾರ್ಡ್ ಆಲ್ಕೊಳದಲ್ಲಿ ಸುಮಾರು 2000 ಜನ ಸಂಖ್ಯೆ ಇದ್ದು, ಓವರ್ ಹೆಡ್ ಟ್ಯಾಂಕ್ ಇಲ್ಲದೆ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ

2. ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ ;

3. ಹಾಗಿದ್ದಲ್ಲಿ, ಸರ್ಕಾರವು ಏನು ಕ್ರಮ ಕೈಗೊಳ್ಳಲಿದೆ?

ಶ್ರೀ ಎಸ್. ಆರ್.ಮೋರೆ (ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ ಸಚಿವರು)

1. ಬಂದಿದೆ.

2. ಇದೆ.

3. ಶಿವಮೊಗ್ಗ ನಗರಕ್ಕೆ ಸಮಗ್ರ ನೀರು ಸರಬರಾಜು ಅಭಿವೃದ್ಧಿ ಪಡಿಸಲು ಸರಬರಾಜು ಅಭಿವೃದ್ಧಿ ಪಡಿಸಲು ರೂ.28.00 ಕೋಟಿಗಳ ಯೋಜನೆ ತಯಾರಿಸಲಾಗಿದ್ದು, ಈ ಯೋಜನೆಯಲ್ಲಿ